“ಇಷ್ಟೂ ಅಷ್ಟೂ ಅಂತೇನಿಲ್ಲ. ಈ ನಡುವ ಸ್ವಲ್ಪ ಜಾಸ್ತಿ ಆಗ್ಯಾದ” ಕುಂತುಗಂಡಿರಾ ಕುರ್ಚಿಗೆ ಆನಿಕೆಂಡು ಎದುರಿಗಿರಾ ಗ್ವಾಡೆ ಕಡೆ ನೋಡಿಕೆಂತ ಹೇಳಿದ ಆತ.

ಆಕಿ ಇನ್ನೊಂದು ಪ್ರಶ್ನೆ ಕೇಳಾದರಾಗ, ತಾನೇ ಮಾತಿಗೆ ಶುರುವಚ್ಚಿಗೆಂಡ.

“ನನ್ನ ಹೆಸರು ವರಾಹಮೂರ್ತಿ ಅಂತ. ನಾನು ಸಣ್ಣವನಿದ್ದಾಗೇ ನಮ್ಮಪ್ಪ ಆಂಧ್ರದ ಶ್ರೀಕಾಕುಳಂ ಜಿಲ್ಲೆಯ ರಾಜಾಂನಿಂದ ಈ ಕಡೆಗೆ ಗುಳೇ ಬಂದ. ಗಂಗಾವತಿ ಹತ್ರ ಸ್ವಲ್ಪ ದಿಸ ಹೊಲ ಮಾಡ್ದ. ಆಮೇಲೆ ಹಂಪಿ ಗುಡಿ ಮುಂದಿನ ದಾರ್‍ಯಾಗ ಸಣ್ಣ ಬಟ್ಟೆ ಅಂಗಡಿ ಇಟುಗಂಡ. ಆತ ಸತ್ತ ಮ್ಯಾಲೆ ನಾನು ಸ್ವಲ್ಪ ವರ್ಷ ಆ ಅಂಗಡ್ಯಾಗ ಕುಂತಗಂತಿದ್ದೆ. ಆಮ್ಯಾಗ ಅರ್ಕ್ಯಾಲಜಿ ಡಿಪಾರ್ಟ್‌ಮೆಂಟಿನವ್ರು ಅದನ್ನ ಒಡದು ಹಾಕಿದ್ರು. ಅಲ್ಲಿಂದ ನಾನು, ನನ್ ಹೆಂಡ್ತಿ ನದಿ ದಾಟಿ ಇರುಪಾಪುರ ಗಡ್ಡಿಗೆ ಬಂದ್ವಿ. ಅಲ್ಲಿ ಸ್ವಲ್ಪ ದಿವಸ ಫಾರಿನ್ ಟೂರಿಸ್ಟುಗಳಿಗೆ ಗೈಡ್ ಆಗಿ ಕೆಲ್ಸ ಮಾಡಿದೆ. ಅವರಿಗೆ ಬೈಕು, ಸೈಕಲ್ಲು ರೆಂಟಿಗೆ ಕೊಡ್ತಿದ್ದೆ. ನಾಲ್ಕು ವರ್ಷದ ಕೆಳಗೆ ವಿಪರೀತ ಹೊಳೆ ಬಂದಿತ್ತು. ಡ್ಯಾಮಲ್ಲಿ ನೀರು ಬೇರೆ ಬಿಟ್ಟಿದ್ರು. ನನ ಹೆಂಡ್ತಿ ನದಿ ದಾಟಿಗೆಂಡು ಅಂಜನಾದ್ರಿ ಗುಡ್ಡಕ್ಕೆ ಹೋದೋಳು, ವಾಪಸು ಬರಾಕಲ್ಲ ಹೊಳ್ಯಾಗ ಸಿಕ್ಕು ಹಾಕ್ಕಂಡ್ಲು. ಕಲ್ಲು ಗುಂಡುಗಳ ನಡುವ ಸುಳ್ಯಾಗ ಆಕೆ ಹೊಡಕೊಂಡು ಹೋಗ್ತಿರಾದು ಇನ್ನಾ ನನ್ನ ಕಣ್ಣಿಗೆ ಕಟ್ಟಿದಂಗೇ ಐತಿ.”

“ಅಯ್ಯೋ.”

ಸ್ವಲ್ಪ ಹೊತ್ತು ಆತ ಸುಮ್ಮನೆ ಕುಂತುಬುಟ್ಟ. ಪದ್ಮಳಿಗೆ ಏನು ಮಾತಾಡಬೇಕೋ ಗೊತ್ತಾಗಲಿಲ್ಲ. ಆದ್ರೇ ಆತನ ಬಗಲಾಗ ಕುಂತುಗಂಡಿದ್ದು ಆಕಿಗೆ ಒಂದು ನಮೂನಿ ಸಮಾಧಾನ ಕೊಟ್ಟಿತ್ತು.

“ನಿನ್ ಹೆಸ್ರು?” ಆತ ಇದ್ದಕ್ಕಿದ್ದಂಗ ಕೇಳ್ದ.

“ಪದ್ಮ.”

“ಛೊಲೋ ಐತಿ.”

“ಈಕಡೆ ಬರ್‍ರಿ” ಆತನ ಕೈಹಿಡಿದು ಮಂಚದ ಮ್ಯಾಲ ಕುಂದ್ರಿಸಿದ್ಲು ಪದ್ಮ. ಮಂಚದ ಕೋಡಿನ ಬತೇಗಿದ್ದ ದಿಂಡಿನ ಮೇಲೆ ತಲೆ ಆನಿಸಿ ಆಕೀ ಕಡೆ ನೋಡ್ದ ಆತ. ಒಂದು ಕೈನ ಆತನ ನಡುವಿನ ಮ್ಯಾಗಲಿದ್ದ ಆ ಕಡೆಗೆ ಹಾಕಿ, ಆತನ ಎದೆ ಮ್ಯಾಲೆ ಏನೋ ಬರೀತಿದ್ದಂಗ ಬಳ್ಳು ಆಡಸಾಕತ್ತಿದ್ಲು ಆಕಿ.

“ರಾಯಚೂರಿಗೆ ಯಾಕ್ ಬಂದಿದ್ರಿ?”

“ಇಲ್ಲಿಗೆ ಯಾಕ್ ಬಂದೆ ಅಂತ ನನಗೇ ಗೊತ್ತಿಲ್ಲ. ಬೆಂಗಳೂರಿನ್ಯಾಗ ಸ್ವಲ್ಪ ದಿಸ ಇದ್ದೆ. ಅಲ್ಲಿ ಬೇಜಾರಾಯ್ತು. ಪುಣೆಕ್ಕ ಹೋಗಾಣ ಅಂತ ಬೆಂಗ್ಳೂರಿನ್ಯಾಗ ರೈಲು ಹತ್ತಿದ್ದೆ. ಬೆಳಗ್ಗೆ ಐದು ಗಂಟೆಗೆ ಮಂತ್ರಾಲಯದ ಹತ್ಯಾಕ ರೈಲು ತುಂಗಭದ್ರ ನದಿಯ ಬ್ರಿಡ್ಜ್ ದಾಟಿಕೆಂತ, ದಡಾದಡ್... ದಡಾದಡ್... ಮಾಡಿದ ಶಬ್ದ ನನ್ನ ಎದೆ ಕುಟ್ಟಿದಂಗಾಯ್ತು. ನನ್ನ ಹೆಂಡ್ತಿ ಹೆಣ ವಿರುಪಾಪುರ ಗಡ್ಡಿಲಿಂದ ಬಂದು ಆ ಬ್ರಿಡ್ಜಿನ ಕೆಳಗೇ ಪಾಸ್ ಆಗಿ ಮುಂದಕ ಹೊಗಿರಬೇಕು ಅಂತ ನೆನಪಾಗಿ ಮನಸ್ಸೆಲ್ಲಾ ಕೆಟ್ಟೋದಂಗಾಯ್ತು. ಮುಂದಕ ಹೋಗಾಕ ಮನಸಾಗಲಿಲ್ಲ. ರಾಯಚೂರಿಗೆ ಇಳ್ಕಂಬುಟ್ಟೆ” ಹೇಳಿದ ಆತ.

“ಇಲ್ಲಿಗೆ ಬಂದು ಎಷ್ಟು ದಿನ ಆತು?”

“ಇವತ್ತು ಮುಂಜಾಲೆ ಬಂದೆ. ಸಾಯಂಕಾಲ ಮಾವಿನಕೆರೆ ದಂಡೆಗೆ ಕುಂತುಗಂಡಿದ್ದೆ. ಯಾವನೋ ಇಲ್ಲಿಗೆ ಕರಕಂಬಂದ.”

“ನಮ್ಮಂತೋರು ಗೊತ್ತಾ?”

“ಇಲ್ಲ. ಇದೇ ಮೊದ್ಲು ಇಂಥಾ ಜಾಗಕ್ಕ ಬಂದದ್ದು.”

“ಇಲ್ಲಿಂದ ಮುಂದಕ ಎಲ್ಲಿಗೆ ಹೋಗಾಣ ಅಂದ್ಕಂಡೀರಿ?”